ಮೈಸೂರ ಗೆಜೆಟ್

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಡಿಶಂಬರ್ ತಾ॥ 3, ಸ್ 1887.

ಗಮನ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವೆ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್‌ರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಜೀಫ್ ಕೋರ್ಟಿನಲ್ಲಿ.

ಕ್ರಿಮಿನಲ್ ತರಫ್.

ಸ್ 1887ನೇ ಇಸವಿ ನವಂಬರ್ 10ನೇ ತಾರೀಖಿನ 49ನೇ ನಂಬರ್ ರೂಲ್ ಆಫ್ ಪ್ರಾಕ್ಟಿಸ್.

ಪೋಲೀಸ್ ಸ್ಟೇಷನ್ನಲ್ಲಿ ಇಡುವ ಅಸಲ್ ಡೈರೀಗಳನ್ನು ಮತ್ತು ಇತರ ರೆಜಿಸ್ಟರುಗಳನ್ನು ಮೇಜಿಸ್ಟ್ರೇಟ್‌ಗಳ ಮತ್ತು ಸೆಷ್ಷ ಕೋರ್ಟುಗಳ ಮುಂದೆ ಹಾಜರ್ಮಾಡುವ ಬಗ್ಯೆ ತೆಗದುಕ್ಕೊಂಡು ಹೋಗೋಣದರಿಂದ ಪೋಲೀಸ್ ಕೆಲಸಗಳನ್ನು ನಡಿಸುವದರಲ್ಲಿ ಕೇವಲ ಅನಾನುಕೂಲ್ಯ ಉಂಟಾದೀತೆಂತ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ತಿಳಿಯಪಡಿಸುವದ್ದರಿಂದ, ಜೀಫ್ ಕೋರ್ಟಿನವರು ಆಜ್ಞಾಪಿಸುವದೇನಂದರೆ,—ನ್ಯಾಯ ವಿಮರ್ಶೇಬಗ್ಯೆ ಸದರೀ ಡೈರಿಗಳಲ್ಲಿ ಅಥವಾ ರೆಜಿಸ್ಟರುಗಳಲ್ಲಿ ಬರೆದಿರುವ ಅಂಶಗಳನ್ನು ನೋಡತಕ್ಕದ್ದು ಅವಶ್ಯವೆಂತ ಕ್ರಿಮಿನಲ್ ಕೋರ್ಟಿಗೆ ತೋರುವಾಗ್ಯೆ, ಇಂಡಿಯನ್ ಎವಿಡೆನ್ಸ್ ಆಕ್ಟಿನ ನಿಬಂಧನೆಗಳಿಗೆ ಬಳಪಟ್ಟಿರುವಂತೆ ಅಂಥಾ ಡೈರೀಗಳು ಅಥವಾ ರೆಜಿಸ್ಟರುಗಳ ಸೈ೯ ಮೊಹರಾದ ಕಾಪೀಯನ್ನಾಗಲೀ ಅಥವಾ ಅವುಗಳ ಎಕ್ಸ್ಟ್ರಾಕ್ಟ್ ಎಂಬ ಬಂದು ಭಾಗವನ್ನಾಗಲಿ, ಹಾಜರ್ಮಾಡಬೇಕೆಂದು, ಅಥವಾ ಹಾಜರ್ಮಾಡಿಸಬೇಕೆಂದು, ಇಂಥಾ ಕಾಗದಗಳನ್ನ ಸುಫರ್ದಿನಲ್ಲಿಟ್ಟುಕೊಂಡು ಇರುವ ಪೋಲೀಸ್ ಆಫೀಸರನಿಗೆ ಸಮ್ಮ ಕೊಡಬಹುದು. ಸದರೀ ಆಫೀಸರನಿಗೆ ಮೇಲ್ಪಟ್ಟ ಡೆಪ್ಯುಟಿ ಕಮ್ಮಿಷನರ್ ಅಥವಾ ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರ ಮೂರೀಫತ್ತು ಅಂಥಾ ಸಮನನ್ನ ಕಳುಹಿಸಬೇಕು.

2. ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 172 ನೇ ಸೆಕ್ಷನ್ ಪ್ರಕಾರ ಸ್ಪೆಷಲ್ ಡೈರಿಯ ಅಸಲು ಬುಕ್ಕನ್ನೇ ಹಾಜರುಮಾಡುವದಕ್ಕೆ ಪೋಲೀಸಿನವರು ಬದ್ಧರಾಗಿರುತ್ತಾರೆ. ಇದನ್ನ ಹಾಜರ್ಮಾಡಿಸಿಕೊಳ್ಳದೇ ಇರುವದಕ್ಕೆ ಆಗುವದಿಲ್ಲ; ಆದರೆ ಇತರ ಪೋಲೀಸು ರಿಕಾರ್ಡುಗಳು ಬೇಕಾಗುವ್ಯಾಗ್ಯೆ ಹಿಂದಿನ ಕಲಂನಲ್ಲಿ ಉಕ್ತವಾಗಿರುವ ನಡವಳಿಕೆಯನ್ನ ಅಜರಿಸಬೇಕು.

3. ಅಸಲುಗಳನ್ನ ತರಿಸದೇ ಇರಕೂಡದೆಂತಲೇ ಆಗಲೀ, ಅಥವಾ ಅನ್ಯಗಳನ್ನ ಯಾತಕ್ಕೋಸ್ಕರ ತರಿಸಬೇಕಾಯಿತೋ ಆ ಉದ್ದೇಶವು ಕಾಪಿಗಳನ್ನ ಅಥವಾ ಎಕ್‌ಸ್ಟ್ರಾಕ್ಟ್‌ಗಳನ್ನ ಹಾಜರ್ಮಾಡಿದ್ದರಿಂದ ಸಫಲವಾಗಿ ನೆರವೇರುವದಿಲ್ಲವೆಂತಲೇ ಆಗಲೀ ಸ್ಥಾಪನೆಯಾಗುವ ಸಂದರ್ಭಗಳಲ್ಲಿ ಮಾತ್ರವೇ ಅಸಲ್ ರಿಜಿಸ್ಟರು ಮುಂತಾದವುಗಳನ್ನ ತರಿಸಬೇಕು.

ಸಿವಿಲ್ ತರಫ್.

ಸ್ಯ 1887ನೇ ಇಸವಿ ನವಂಬರು 10ನೇ ತಾರೀಖಿನ 69ನೇ ನಂಬರ್ ರೂಲ್ ಆಫ್ ಪ್ರಾಕ್ಟೀಸ್,

ಪೋಲೀಸ್ ಸ್ಟೇಷ್ಯಗಳಲ್ಲಿ ಇಡುವ ಅಸಲ್ ಡೈರೀಗಳನ್ನು ಮತ್ತು ಇತರ ರಿಜಿಸ್ಟರುಗಳನ್ನು ಸಿವಿಲ್ ಕೋರ್ಟುಗಳ ಮುಂದೆ ಹಾಜರ್ಮಾಡುವಬಗ್ಗೆ ತೆಗದುಕೊಂಡು ಹೋಗೋಣದರಿಂದ ಪೋಲೀಸ್ ಕೆಲಸಗಳನ್ನ ನಡಿಸುವದರಲ್ಲಿ ಕೇವಲ ಅನಾನುಕೂಲ್ಯ ಉಂಟಾದೀತೆಂತ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ತಿಳಿಯಪಡಿಸಿದ್ದರಿಂದ, ಜೇಷ್ಠ ಕೋರ್ಟಿನವರು ಆಜ್ಞಾಪಿಸುವದೇನಂದರೆ,—ನ್ಯಾಯ ವಿಮರ್ಶೆಬಗ್ಗೆ ಸದರೀ ಡೈರೀಗಳಲ್ಲಿ ಅಥವಾ ರಿಜಿಸ್ಟರುಗಳಲ್ಲಿ ಬರೆದಿರುವ ಅಂಶಗಳನ್ನ ನೋಡತಕ್ಕದ್ದು ಅವಶ್ಯವೆಂತ ಸಿವಿಲ್ ಕೋರ್ಟಿಗೆ ತೋರುವಾಗ್ಯೆ, ಇಂಡಿಯನ್ ಎವಿಡೆನ್ಸ್ ಆಕ್ಟಿನ ನಿಬಂಧನೆಗಳಿಗೆ ಬಳಪಟ್ಟರುವಂತೆ, ಅಂಥಾ ಡೈರೀಗಳ ಅಥವಾ ರಿಜಿಸ್ಟರುಗಳ ಸ್ಯೆವೊಹರಾದ ಕಾಪಿಯನ್ನಾಗಲೀ ಅಥವಾ ಅವುಗಳ ಎಕ್‌ಸ್ಟ್ರಾಕ್ಟ್ ಎಂಬ ವೊಂದು ಭಾಗವನ್ನಾಗಲೀ ಹಾಜರ್ಮಾಡಬೇಕೆಂದು, ಅಥವಾ ಹಾಜರ್ಮಾಡಿಸಬೇಕೆಂದು, ಇಂಥಾ ಕಾಗದಗಳನ್ನ ಸುಫರ್ದಿನಲ್ಲಿ ಇಟ್ಟುಕೊಂಡಿರುವ ಪೋಲೀಸ್ ಆಫೀಸರನಿಗೆ ಸರ್ಮ ಕೊಡಬಹುದು. ಸದರೀ ಆಫೀಸರನಿಗೆ ವೇಲ್ಪಟ್ಟ ಡೆಪ್ಯುಟಿ ಕಮ್ಮಿಷನರ್ ಅಥವಾ ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರ ಮಾರೀಫತ್ತು ಅಂಥಾ ಸಮನನ್ನ ಕಳುಹಿಸಬೇಕು.

2. ಅಸಲುಗಳನ್ನ ತರಿಸದೇ ಇರಕೂಡದೆಂತಲೇ ಆಗಲೀ ಅಥವಾ ಯಾತಕ್ಕೋಸ್ಕರ ಅವುಗಳನ್ನ ತರಿಸಬೇಕಾಯಿತೋ ಆ ಉದ್ದೇಶವು ಕಾಪಿಗಳನ್ನ ಅಥವಾ ಎಕ್‌ಸ್ಟ್ರಾಕ್ಟ್‌ಗಳನ್ನ ಹಾಜರ್ಮಾಡಿದ್ದರಿಂದ ಸಫಲವಾಗಿ ನೆರವೇರುವದಿಲ್ಲವೆಂತಲೇ ಆಗಲೀ ಸ್ಥಾಪನೆಯಾಗುವ ಸಂದರ್ಭಗಳಲ್ಲಿ ಮಾತ್ರವೇ ಅಸಲ್ ರೆಜಿಸ್ಟರ್ ಮುಂತಾದವುಗಳನ್ನ ತರಿಸಬೇಕು.

" ಕೋರ್ಟಿನ ಹುಕುಂ ಪ್ರಕಾರ "

ಎಲ್. ಅನಂತ ಸ್ವಾಮಿರಾವ್,

ರೆಜಿಸ್ಟ್ರಾರ್.

ಇನಾಂ ಇಲಾಖಾ.

ನಂ. 1. ತಾರೀಖು 19ನೇ ನವಂಬರು 1887.

ಇನಾಂದಾರರಿಗೆ ಯಿದರಿಂದ ತಿಳಿಸುವದೇನಂದರೆ, ಲೇಟು ದೊಡ್ಡೇರಿ (ಹಾಲಿಚಕ್ಕಳಕೆರೆ) ತಾಲ್ಲೂಕಿನಲ್ಲಿ ಯಿರತಕ್ಕ ಚಿಲ್ಲರೆ ಇನಾಂಗಳ ಬಾಬತು 136 ಫೈನಲ್‌ಟೈಟಲ್‌ಡೀಡ್ಸು ಯಾನೆ ಖಾಯಂ ಪಟ್ಟೇಗಳು ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಗೆ ಬಟವಾಡೇ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕಿನ ಅಮಲ್‌ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದ ಮೇಲೆ ಆವುಗಳನ್ನು ತೆಗದುಕೊಳ್ಳುವ ಬಗ್ಗೆ ಸದರೀ ಇನಾಂದಾರರು ಐರ್ಜ್ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟೀಸ್‌ಗಳನ್ನು ದೇರ್‌ಮಾಡದೆ, ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.